# ಪ್ರಥಮ ದರ್ಜೇ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ

**CC.No. 2070/2021**

**CW : 09 PW: 05**

## ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 21.01.2026

| | |
|---|---|
| ಹೆಸರು | : ಮಹಾಂತೇಶ |
| ತಂದೆ ಹೆಸರು | : ಮಲಕಣ್ಣಾ |
| ವಯಸ್ಸು | : 53 |
| ಉದ್ಯೋಗ | : ಎ.ಎಸ್.ಐ. ನೇಲೋಗಿ ಪೋಲೀಸ್ ಠಾಣೆ |
| ವಾಸಸ್ಥಳ | : ಕಲಬುರಗಿ |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನಾನು ಶಹಾಬಾದ ನಗರ ಠಾಣೆಯಲ್ಲಿ 2017 ರಿಂದ 2021 ರವರೆಗೆ ಮುಖ್ಯೆ ಪೇದೆ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಈ ಪ್ರಕರಣದದಲ್ಲಿ ದಿ: 06/10/2020 ರಂದು 2 ಗಂಟೆಯಿಂದ 8 ಗಂಟೆಯವರೆಗೆ ಠಾಣಾ ಕರ್ತವ್ಯದಲ್ಲಿ ಇರುವಾಗ 6.30 ರ ಸುಮಾರಿಗೆ ಚಾಸಾ-1 ಇವರು ಆರೋಪಿ ಮತ್ತು ಜಪ್ತಿ ಮಾಡಿದ ಮುದ್ದೆ ಮಾಲುಗಳನ್ನು ತಂದು ಹಾಜರುಪಡಿಸಿದ ಸಾರಾಂಶದ ಮೇರೆಗೆ ಕಲಂ 32 ಮತ್ತು 34 ಕರ್ನಾಟಕ ಅಬಕಾರಿ ಕಾಯ್ದೆ ಅಡಿಯಲ್ಲಿ ಹಾಗೂ ಕಲಂ 273 ಭಾರತೀಯ ದಂಡ ಸಂಹಿತೆ ಇದರ ಅಡಿಯಲ್ಲಿ ಪ್ರಕರಣವನ್ನು ದಾಖಲು ಮಾಡಿಕೊಂಡಿದ್ದು ಇರುತ್ತದೆ.

ನಂತರದಲ್ಲಿ ನಾನು ನಮ್ಮ ಸಿಬ್ಬಂದಿ ಕೈಯಿಂದ ಪ್ರ.ವ.ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅದೇ ದಿನ ಚಾಸಾ-4 ರಿಂದ 7 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದು ಇರುತ್ತದೆ. ಅದೇ ದಿನದಂದು ನಾನು ಪಿ.ಎಫ್ ನ್ನು ತಯಾರಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿ: 20/11/2020 ರಂದು ಆರೋಪಿತರು ನ್ಯಾಯಾಲಯದಿಂದ ನೀಡಿರುವ ನಿರೀಕ್ಷಣ ಜಾಮೀನಿನ ಪ್ರತಿಯನ್ನು ನಮ್ಮ ವಶಕ್ಕೆ ನೀಡಿದ್ದು ಇರುತ್ತದೆ. ಅದನ್ನು ಕಡತಕ್ಕೆ ಅಳವಡಿಸಿಕೊಂಡು ದಸ್ತಗೀರ ನಿಯಮವನ್ನು ಪಾಲಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದು ಇರುತ್ತದೆ. ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-10 ಇವರಿಗೆ ನೀಡಿದ್ದು ಇರುತ್ತದೆ. ಆರೋಪಿತನನ್ನು ಗುರುತಿಸಬಲ್ಲೆ, ನ್ಯಾಯಾಲಯದಲ್ಲಿ ಉಪಸ್ಥಿತರಿತುತ್ತಾರೆ. ಮುದ್ದೆ ಮಾಲುಗಳನ್ನು ನೋಡಿದರೆ ಗುರುತಿಸಬಲ್ಲೆ, ಅವುಗಳನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ.

ನಿ.ಪಿ.1 ರ ಮೇಲಿರುವ ಸಾಕ್ಷಿದಾರರು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು,

ಅದನ್ನು ನಿ.ಪಿ.1 (ಬಿ) ಎಂದು, ಪ್ರ.ವ.ವರದಿಯನ್ನು ನಿ.ಪಿ.4 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.4 (ಎ) ಎಂದು ನಿಶಾನೆಗೊಳಿಸಲಾಯಿತು.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ.</u>**

ನಾನು ಠಾಣಾ ಕರ್ತವ್ಯದಲ್ಲಿರುವಾಗ ನನ್ನ ಮೇಲಾಧಿಕಾರಿಗಳು ಆರೋಪಿ, ಪಂಚನಾಮೆ ಮತ್ತು ಜ್ಞಾಪನ ಪತ್ರವನ್ನು ನನ್ನ ತಾಬೆಗೆ ಒಪ್ಪಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾನು ಚಾಸಾ-4 ರಿಂದ 7 ಇವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಜಪ್ತು ಮಾಡಿಕೊಂಡಿರುವ ಮುದ್ದೆ ಮಾಲಿಗೆ ಪಿ.ಎಫ್.ನ್ನು ಅಳವಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮು.ಮಾ.1 ಅಂಗಡಿಗಳಲ್ಲಿ ಸಿಗುವ ಬೆಲ್ಲ ಇರುತ್ತದೆ ಎಂದರೆ ಸರಿ. ಸದರಿ ಮು.ಮಾ.1 ಆರೋಪಿಗೆ ಸೇರಿರುವ ಕುರಿತು ನಾನು ಯಾವುದೇ ತಪಾಸಣೆಯನ್ನು ಕೈಗೊಂಡಿರುವುದಿಲ್ಲ ಎಂದರೆ ಸರಿ. ಸದರಿ ಮು.ಮಾ.1 ಕ್ಕೂ ಆರೋಪಿಗೂ ಸಂಬಂಧ ಇಲ್ಲದಿದ್ದರೂ ಸಹ ನಾನು ಮೇಲಾಧಿಕಾರಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇದೇ ಮೊದಲ ಬಾರಿಗೆ ಆರೋಪಿಯನ್ನು ನಾನು ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**Sd/-**
**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**